

◆ **ನಿಮ್ಮ ಬಾಲ್ಯ ಮತ್ತು ಶಿಕ್ಷಣವು ಓದು ಮತ್ತು ಅಧ್ಯಯನಕ್ಕೆ ಪೂರಕವಾಗಿದ್ದಿರಬೇಕು... ಯಕ್ಷಗಾನ ಮತ್ತು ತತ್ತ್ವಶಾಸ್ತ್ರದ ಪ್ರೀತಿ ಹುಟ್ಟಿದ ಬಗೆ ಹೇಗೆ ?**

ನನಗೆ ಅತ್ಯಂತ ಪ್ರಿಯವಾದುದು ಯಕ್ಷಗಾನ. ಯಕ್ಷಗಾನದ ಸಲುವಾಗಿ ನಾನು ಹೆಚ್ಚು ಹೆಚ್ಚು ಓದುತ್ತ ತತ್ತ್ವಶಾಸ್ತ್ರದತ್ತ ವಾಲಿದ್ದೇನೆಯೇ ಹೊರತು, ತತ್ತ್ವಶಾಸ್ತ್ರದ ಹೆಗ್ಗುರುತು ಪಡೆಯುವಷ್ಟು ಸಾಧನೆ ನಾನು ಈ ಕ್ಷೇತ್ರದಲ್ಲಿ ಮಾಡಿದ್ದಿಲ್ಲ. ಕಾರ್ಕಳದ ಮಾಳ ನನ್ನ ಹುಟ್ಟೂರು. ತಂದೆ ನಾರಾಯಣ ಜೋಶಿ ಅವರು ಗೋಕರ್ಣ, ಶೃಂಗೇರಿ ಮುಂತಾದೆಡೆ ವೈದಿಕ ಅಧ್ಯಯನವನ್ನು ಮಾಡಿದ್ದರೂ ಅವರು ಮುಖ್ಯವಾಗಿ ಕೃಷಿಕರು. ಅಡಕೆ ಬೆಳೆಗೆ ಅಷ್ಟೇನೂ ಧಾರಣೆಯಿಲ್ಲದ ಕಾಲದಲ್ಲಿ ಬಿತ್ತಿದಷ್ಟು ಬೆಳೆಯುತ್ತ, ಬೆಳೆದದ್ದರಲ್ಲಿ ಉಳಿದದ್ದನ್ನು ಬಳಸುತ್ತ ಬೆಳೆದವರು ನಾವು. ಅಮ್ಮ ಚಂದ್ರಾವತಿ ಲಕ್ಷ್ಮೀಬಾಯಿ ಅವರು ಸಂಸಾರವನ್ನು ತೂಗಿಸಿಕೊಂಡು ಹೋಗುತ್ತಿದ್ದರು. ನಾನು ಕೃಷಿಕಾಯಕಗಳನ್ನು ಮಾಡುತ್ತ, ಬಾಲ್ಯದಲ್ಲಿ ಶಾಲೆ, ಓದು ಓಡಾಟಗಳಲ್ಲಿ ತೊಡಗಿಸಿಕೊಂಡಿದ್ದೆ. ತಂದೆಯವರು ಭಗವದ್ಗೀತೆ, ವೇದ, ಕಾವ್ಯ ಮುಂತಾದ ಅಧ್ಯಯನ ಮಾಡಿದವರು. ದೈನಂದಿನ ಕೆಲಸ ನಿರ್ವಹಿಸುವಾಗಲೇ ಭಗವದ್ಗೀತೆಯ ಅನೇಕ ಶ್ಲೋಕಗಳನ್ನು ಅನ್ವಯಿಸಿ ಹೇಳುತ್ತಿದ್ದರು. ಆ ಅನ್ವಯವು ನಾವು ಮಾಡುವ ಕೆಲಸ ಕಾರ್ಯಗಳಿಗೇ ಅನ್ವಯಿಸಿದ್ದಾದ್ದರಿಂದ ನಂಗೆ ಅವುಗಳಲ್ಲಿ ಹೆಚ್ಚಿನ ಆಸಕ್ತಿ ಮೂಡಿತು. ಉದಾಹರಣೆಗೆ, ಅಡಕೆ ತೋಟಕ್ಕೆ ನಾಯಿಯೋ, ದನವೋ ನುಗ್ಗಿ ದಾಂಧಲೆ ಮಾಡುತ್ತಿದ್ದರೆ, ನಾಯಿಯು ಅದನ್ನು ಅಟ್ಟಿಸಿಕೊಂಡು ಹೋಗಿ ಬೊಗಳುತ್ತಿರುವುದನ್ನು ಕೇಳಿಸಿಕೊಳ್ಳುವ ಅಪ್ಪ, ಸುಖಿನಃ ಕ್ಷತ್ರಿಯಃ ಪಾರ್ಥ ಲಭಂತೇ ಯುದ್ಧಮೀದೃಶಮ್ ಎನ್ನುತ್ತ ತೋಟದತ್ತ ಓಡುತ್ತಿದ್ದರು. ಅಡಕೆ ತೋಟಕ್ಕೆ ಔಷಧಿ ಹೊಡೆಯಬೇಕಿದೆ